ಹೇಳಿಕೊಳ್ಳುವಂತಹ ಯಾವುದೇ ಗರಿಮೆ ಇರಲಿಲ್ಲ.

ಸ್ನೇಹಿತರೂ, ಸಹೋದ್ಯೋಗಿಗಳೂ ಎಸ್‌ಎಸ್‌ಎಲ್‌ಸಿ, ಪಿಯುಸಿ ಫಲಿತಾಂಶ ಬಂದಾಗ ತಮ್ಮ ತಮ್ಮ ಮಕ್ಕಳ ಅಂಕಪಟ್ಟಿಯನ್ನು what's app Statusಗೆ ಹಾಕುವುದಲ್ಲದೇ, ಒಬ್ಬರಿಗೊಬ್ಬರು ತಮ್ಮ ಮಕ್ಕಳ ಅಂಕಗಳನ್ನು ತುಲನೆ ಮಾಡಿ ಯಾರು ಯಾವುದರಲ್ಲಿ ಹೆಚ್ಚು ಎಂದು ಚರ್ಚೆ ಮಾಡುವುದನ್ನು ನೋಡಿದ್ದ ಕೃಷ್ಣಮೂರ್ತಿ, ತಮ್ಮ ಮಗ ಎಸ್‌ಎಸ್‌ಎಲ್‌ಸಿಗೆ ಬಂದಾಗ ಆಗಬಹುದಾದ ಮುಖಭಂಗವನ್ನು ನೆನೆದು ಈಗಲೇ ಚಿಂತಿತರಾಗುತ್ತಿದ್ದರು. ವೈಷ್ಣವ್‌ನ ನೋಟ್ಸ್‌ಗಳನಲ್ಲಿ 'Very Good! Keep it up!' ನೋಡಿದ್ದ ಕೃಷ್ಣಮೂರ್ತಿಯವರಿಗೆ ವೈಭವ್‌ನ 'incomplete notes! Please complete' ಎಂದು ಟೀಚರ್ ಬರೆದದ್ದಕ್ಕೆ ಸಹಿ ಹಾಕಬೇಕಾದಾಗ ಕೋಪ ಏರುತ್ತಿತ್ತು. ಇಂತಹುದಕ್ಕೆ ಅನೇಕ ಸಲ ಪೆಟ್ಟು ತಿಂದರೂ ವೈಭವ್ ಓದಿನಲ್ಲಿ ಹೆಚ್ಚಿನ ಬದಲಾವಣೆ ಆಗಿರಲಿಲ್ಲ. ವೈಭವ್‌ಗೆ ಮೊದಲೇ ಕಬ್ಬಿಣದ ಕಡಲೆ ಎನಿಸುತ್ತಿದ್ದ ವಿಷಯಗಳೊಂದಿಗೆ, ಅಪ್ಪನ ಕೋಪದ ಮುಖ, ಹೊಡೆತದ ಭಯವೂ ಸೇರಿ ಪುಸ್ತಕ ಮುಟ್ಟಿದೊಡನೆ ಭಯಕ್ಕೊಳಗಾಗುತ್ತಿದ್ದನು. ವೈಭವ್‌ನ ತಾಯಿ ತನ್ನ ಗಂಡ ಹೊಡೆಯುವುದು ಮಗನ ಒಳಿತಿಗಾಗಿ ಎಂದು ತಡೆಯಲು ಹೋಗುತ್ತಿರಲಿಲ್ಲ. ತಾಯಿ ಕರುಳು ಚುರ್ರೆಂದಾಗ, ಕೃಷ್ಣಮೂರ್ತಿ ಹೊಡೆದು ಹೋದ ನಂತರ 'ಚೆನ್ನಾಗಿ ಓದಿಕೋ ಮಗನೇ, ಸುಮ್ಮನೆ ಏಕೆ ಹೊಡೆಸಿಕೊಳ್ಳುವೆ' ಎಂದು ಸಮಾಧಾನಿಸುವುದಷ್ಟೇ ತಮ್ಮ ಕೆಲಸ ಎಂದು ಭಾವಿಸಿದ್ದರು.

